ನಡೆದುಕೊಳ್ಳುತ್ತಿದ್ದ ಮಣಿ ಕನ್ನಡ ಸಾಹಿತ್ಯ, ಅಧ್ಯಯನ ಮತ್ತು ಓದುಗಳಿಗೆ ಗಮನ ಕೊಡಲಾಗದ ಅಸಹನೆಯ ಮನಃಸ್ಥಿತಿ ಹೊಂದಿದ್ದರು. 'ನಾನು' ಮಾತ್ರ ಎಂಬ ಧೋರಣೆಯ ಹಾದಿ ಅದು. ಆದರೂ ನಮಗೆ ಅಂತಿಮವಾಗಿ ಮುಖ್ಯವಾಗುವುದು ಕಲಾವಿದನ ಸೃಷ್ಟಿಶೀಲತೆ ಮಾತ್ರ. ಈ ಹಿನ್ನೆಲೆಯಲ್ಲಿ ನಮ್ಮ ಅಪರೂಪದ ಕಲಾವಿದರ ಸಾಲಿನಲ್ಲಿ ನಿಲ್ಲುವ ಜೆ.ಎಂ.ಎಸ್. ಮಣಿ ದೊಡ್ಡದೊಡ್ಡ ಕನಸು ಕಂಡವರು. ಹುಸೇನರಂತೆ ಬೃಹತ್ತಾಗಿ ಸೃಷ್ಟಿಸುವ, ಬೆಳೆಯುವ ಮಹತ್ವಾಕಾಂಕ್ಷೆಯನ್ನು ಅವರಿಂದ ದೊಡ್ಡ ರೀತಿಯಲ್ಲಿ ಸಾಧಿಸಲಾಗಲಿಲ್ಲ. ಅದೃಷ್ಟ, ಅನಾರೋಗ್ಯ ಅದಕ್ಕೆ ಅಡ್ಡಿಯಾಗಿದ್ದವು. ಆದರೆ, ಅವರು ಕನಸಿದಂತೆ ಚಿತ್ರಿಸುವ, ಅವರಲ್ಲಿ ಕಲಿತ ಎಂ. ನಾರಾಯಣ ಈಗ ಪುಣೆಯಲ್ಲಿ ಇದ್ದುಕೊಂಡು ದೊಡ್ಡ ರೀತಿಯಲ್ಲಿ ಚಿತ್ರಿಸುತ್ತಿರುವುದು ಆಶಾದಾಯಕ.

ಕೊರೊನಾ ಪೂರ್ವ ಕಾಲದ ಕನ್ನಡ ದೃಶ್ಯಕಲಾ ಸಂದರ್ಭದಲ್ಲಿ ಹೆಚ್ಚು ಬೇಡಿಕೆಯಲ್ಲಿದ್ದವರು ಮಣಿ. ಹಾಗಿದ್ದೂ ತಮ್ಮ ಕಲಾಕೃತಿಗಳ ಬೆಲೆಗಳನ್ನು ಹೆಚ್ಚಿಸಲು ಪ್ರಯತ್ನಿಸಲೇ ಇಲ್ಲ. ಈ ಹಿನ್ನೆಲೆಯಲ್ಲಿ ಗ್ಯಾಲರಿಗಳ ಮಾರುಕಟ್ಟೆ ರಾಜಕಾರಣವೂ ಇದ್ದೇ ಇದೆ. ಆದರೂ ಇದು ಮಣಿಯವರ ಈ ಆತಂಕದ ಸಂದರ್ಭದ ಸಾಮಾಜಿಕ ಹೊಣೆಗಾರಿಕೆಯನ್ನು ಬಿಂಬಿಸುತ್ತದೆ. ಹೀಗಾಗಿಯೂ ದೇಶದ ಪ್ರತಿಷ್ಠಿತ ಪಂಚತಾರಾ ಸಂಸ್ಕೃತಿಯ ಕಲಾ ಸಂಗ್ರಾಹಕರು, ಹಲವಾರು ಗ್ಯಾಲರಿಗಳೇ ಅಲ್ಲದೆ, ಜನ ಸಾಮಾನ್ಯ ಕೊಳ್ಳುಗರಲ್ಲಿಯೂ ಅವರ ಕೃತಿಗಳು ಸಂಗ್ರಹಿಸಲ್ಪಟ್ಟಿವೆ.

ಎಂ.ಎಫ್. ಹುಸೇನ್ ಅವರನ್ನು ಭೇಟಿಯಾಗಲು ನಾನೊಮ್ಮೆ ಬೆಂಗಳೂರಿನ ವಿಂಡ್ಸರ್ ಮ್ಯಾನರ್ ಹೋಟೆಲಿಗೆ ಹೋದಾಗ, ಅವರು ತಮ್ಮ ಕಲಾಕೃತಿಗಳ ಚೌಕಟ್ಟುಗಳನ್ನು ರೂಪಿಸಲು ಮಣಿಯವರ ಜೊತೆ ಮಗ್ನರಾಗಿದ್ದರು. ಒಂದು ಕಲಾಕೃತಿಯ ಎಲ್ಲ ಆಯಾಮಗಳನ್ನೂ ಮಣಿ ಬಲ್ಲವರಾಗಿದ್ದರು ಎಂಬುದನ್ನು ಇದು ಸೂಚಿಸುವಂತಿದೆ.

## ಕೆ.ವಿ. ಸುಬ್ರಹ್ಮಣ್ಯಂ

ಕನ್ನಡದ ಪ್ರಮುಖ ಕಲಾ ಲೇಖಕರಲ್ಲಿ ಒಬ್ಬರು. ಕಲಾ ವಿಮರ್ಶಕರಾಗಿ ಹಾಗೂ ಕಲಾ ಇತಿಹಾಸಕಾರರಾಗಿ ಗಣನೀಯ ಕೆಲಸ–ಬರವಣಿಗೆ ಮಾಡಿದ್ದಾರೆ. ಬೆಂಗಳೂರು ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ವಾಗಟ ಅಗ್ರಹಾರದವರು. ಮೈಸೂರು ವಿಶ್ವವಿದ್ಯಾಲಯದಿಂದ ಬಿ.ಎ. ಪದವಿ ಪಡೆದಿದ್ದಾರೆ.

ಸ್ವತಃ ಕಲಾವಿದರೂ ಆಗಿರುವ ಸುಬ್ರಹ್ಮಣ್ಯಂ ಅವರು ಹಲವು ಕಲಾಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ಕಳೆದ ನಾಲ್ಕು ದಶಕಗಳಿಂದ ಕನ್ನಡದಲ್ಲಿ ದೃಶ್ಯಕಲೆಯ ಚಿತ್ರ, ಶಿಲ್ಪ, ಪ್ರಿಂಟ್, ಇನ್‌ಸ್ಟಾಲೇಷನ್, ಛಾಯಾಚಿತ್ರಗಳ ಬಗ್ಗೆ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. 'ಕೆ. ವೆಂಕಟಪ್ಪ ಸಮಕಾಲೀನ ಪುನರವಲೋಕನ', 'ಎಸ್.ಜಿ. ವಾಸುದೇವ್', 'ವಿಜಯ ಸಿಂಧೂರ', 'ಎನ್. ಹನುಮಯ್ಯ', 'ಆರ್.ಎಸ್. ನಾಯ್ಡು', 'ಪೊನ್ನಪ್ಪ ರಾಜಾರಾಮ್', 'ವೆಂಕಟಾಚಲಪತಿ' ಅವರು ಪ್ರಕಟಿಸಿದ ಕಲಾವಿದರ ಜೀವನ ಚರಿತ್ರೆಗಳು. 'ಕರ್ನಾಟಕದ ಆಧುನಿಕ ಶಿಲ್ಪಕಲೆ', 'ಕಲಾ ಸಂವೇದನೆಯ ಒಳನೋಟಗಳು', 'ಕನ್ನಡ ಶಿಲ್ಪಕಲೆಯ ಸಮಕಾಲೀನ ದೃಶ್ಯ', 'ಇನ್‌ಸ್ಟಾಲೇಷನ್ ಕಲಾ ಪ್ರಪಂಚ', 'ದೃಶ್ಯಧ್ಯಾನಗಳು' – ಸುಬ್ರಹ್ಮಣ್ಯಂ ಅವರ ಚಿತ್ರ–ಶಿಲ್ಪಕಲೆಯ ಕುರಿತ ಪುಸ್ತಕಗಳು. ಕೋಲಾರ ಜಿಲ್ಲೆಯ ಘಟ್ಟಮಾದಮಂಗಲ, ಟೇಕಲ್, ಆಂಧ್ರಪ್ರದೇಶದ ಕಂಗುಂದಿ, ರಾಯದುರ್ಗಗಳಲ್ಲಿನ ಬೃಹತ್ ಶಿಲಾಶ್ರಯದಲ್ಲಿನ ಆದಿಮ ಚಿತ್ರಗಳನ್ನು ಶೋಧಿಸಿ, ಆ ಕುರಿತ ಎರಡು ಪುಸ್ತಕಗಳನ್ನು ಅವರು ಪ್ರಕಟಿಸಿದ್ದಾರೆ.